# ಕೊಲೆಯ ಸಾಧ್ಯತೆಗಳ ಸುತ್ತ, ಅನುಮಾನಗಳ ಹುತ್ತ

'ಅರ್ಥ ಆಯ್ತು ಸಾರ್. ಸಾರ್, ಇನ್ನೊಂದು ಗಮನಿಸಿದ್ರ ನೀವು?'

ಮಾಯಣ್ಣ ಪ್ರಶ್ನಾರ್ಥಕವಾಗಿ ನೋಡಲು,

'ಬಾಡಿ ಮೇಲೆ, ಓಲೆ ಆಗ್ಲಿ, ಮೂಗುತಿ ಆಗ್ಲಿ, ಬಳೆ ಆಗ್ಲಿ ಒಂದೂ ಇರಲಿಲ್ಲ ಸಾರ್.'

'ಅಷ್ಟೇ ಏನು ವಿನಯ್, ಕತ್ತಲ್ಲಿ ಚೈನ್ ಕೂಡ ಇರಲಿಲ್ಲ. ಆಮೇಲೆ ವಿವರವಾಗಿ ನೋಡೋಣ ಬಿಡಿ. ಸರಿ ಅವರೆಲ್ಲಾ ಬರೋತನಕ ಯಾರೂ ಒಳಗೆ ಹೋಗೋದು ಬೇಡ. ಅಷ್ಟರಲ್ಲಿ ನಿಮಗೆ ಈ ಕೊಲೆಯ ಸುದ್ದಿ ಮೊದಲು ಕೊಟ್ಟ ಆ ಮನೆ ಕೆಲಸದಾಕೆ ಹತ್ರ ಮಾತಾಡೋಣ ಕರೆಸಿ. ಆಕೆ ಇನ್ವೆಸ್ಟಿಗೇಷನ್‌ಗೆ ತುಂಬಾ ಮುಖ್ಯವಾದ ಸಾಕ್ಷಿ. ಕೀಪ್ ಟ್ರ್ಯಾಕ್ ಆಫ್ ಹರ್.'

'ಸಾರ್ ಇನ್ನೊಂದು... ಮೊದಲು ಅಮ್ಮ ಜೊತೆಗೆ ಈ ಮನೇನ ಅವರ ಊರಿನ ಓಲ್ಡ್ ಫ್ರೆಂಡೊಬ್ಬರು ಶೇರ್ ಮಾಡ್ಕೊಂಡಿದ್ರಂತೆ. ಸಿತಾರ ಅಂತ... ಈಗ ಆಕೆ ಮೂರು ತಿಂಗಳಿಂದ ಇಲ್ಲೇ ಸ್ವಲ್ಪ ದೂರದಲ್ಲಿ ಬೇರೆ ವಾಸ ಇದ್ದಾರೆ. ಫೋನ್ ಮಾಡಿ ಹೇಳಿದ್ದೀನಿ, ಅವ್ರೂ ಇನ್ನೇನು ಬರ್ತಾರೆ ಸಾರ್.'

'ಗುಡ್ ಜಾಬ್.'

'ಬಂದು ಬಾಡೀನ ನೋಡ್ಬೇಕು ಅಂತ ತುಂಬಾ ಗೋಳಿಡ್ತಾಯಿದ್ದಾರೆ ಸಾರ್.'

'ವಿನಯ್ ಈಸ್ ಇಟ್ ಪಾಸಿಬಲ್. ಕ್ರೈಮ್ ಸ್ಪೈಟ್ ಇನ್ವೆಸ್ಟಿಗೇಷನ್ ಮುಗಿಯೋ ತನಕ ನೊ ಬಡಿ ಕೆನ್ ಬಿ ಅಲೋವ್ಡ್. ಬರಲಿ ಅವರು, ಹೇಗಿದ್ರೂ ಅವರ ಹತ್ರನೂ ಮಾತಾಡೋದಿದೆ. ಅದಕ್ಕೂ ಮುಂಚೆ ನಾನು ಈ ಮನೆ ಓನರ್ಸ್ ಹತ್ರ ಮಾತಾಡ್ಬೇಕು. ಇಲ್ಲಿ ಕುಂಬಯ್ಯ ಅವರನ್ನ ಕರುಸ್ಕೊಳ್ಳಿ ನಿಮ್ಮ ಜೊತೆ.'

'ಯೆಸ್ ಸಾರ್...'

ಮಾಯಣ್ಣನಿಗೆ ಗೊತ್ತು. ವಿನಯ್ ಮೇಲೆ ತುಂಬಾ ಒತ್ತಡ ಬೀಳ್ತಾ ಇದೆ ಅಂತ. ಆದರೆ ಇದೂ ಗೊತ್ತು– ನೀರಿಗೆ ಇಳಿಸದೆ ಈಜು ಕಲಿಸೋದಕ್ಕೆ ಆಗಲ್ಲ ಅಂತ. ಅವನಾದ್ರೂ ಅಷ್ಟೇ, ಕಲಿಯುವ ಹುಮ್ಮಸ್ಸಿನಲ್ಲಿಯೇ, ಶ್ರದ್ಧೆಯಿಂದ ಕೆಲಸದಲ್ಲಿ ತೊಡಗಿಸಿಕೊಳ್ತಾಯಿದ್ದ.

ವಿನಯ್ ಬರಿ ಹೇಳಿದಷ್ಟೇ ಕೆಲಸಕ್ಕೆ ಸಿಮಿತವಾಗುವ ಪೇದೆ ಅಲ್ಲ. ಭುಜಂಗನ ತರ ಮುಂದಿನ ನಡೆಗಳ, ಅದರ ಸಾಧಕ ಬಾಧಕಗಳ,

